ಶ್ರೀ ಕೆ.ಎಚ್. ಹನುಮೇಗೌಡ—ನಾನು ಹೇಳಿದ್ದು ಮಿನಿಮಮ್ ಚಾರ್ಜಸ್ ಎಂದಲ್ಲ ಡಿಮ್ಯಾಂಡ್ ಚಾರ್ಜಸ್.

ಶ್ರೀ ಕೆ.ಎಚ್. ಶ್ರೀನಿವಾಸ್—ಆ ರೀತಿ ಡಿಮ್ಯಾಂಡ್ ಚಾರ್ಜಸ್ ಎಂಬುದಾಗಿ ವಸೂಲು ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸುತ್ತೇನೆ.

ಆಮೇಲೆ ಪುನರ್ವಿಮರ್ಶಿಸಿದ ದರದ ಟ್ಯಾರಿಫ್ ಏನಿದೆ ಅದನ್ನು ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ವಿಶೇಷವಾಗಿ ಐ.ಪಿ. ಸೆಟ್ಸ್ ಇಟ್ಟುಕೊಂಡಿರುವವರಿಗೆ ಬಹಳ ತೊಂದರೆಯಾಗಿದೆ ಎಂಬುದಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಟ್ಯಾರೀಫ್ ರಿವೈಜ್ ಮಾಡಬೇಕಾದರೂ ಕೂಡ ವ್ಯವಸಾಯಗಾರರಿಗೆ ಅದರಲ್ಲಿ ಹೆಚ್ಚಿನ ಹೊರೆಯನ್ನು ಹೊರಿಸಬಾರದು ಎನ್ನುತಕ್ಕಂಥ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ ಎಂಬುದಾಗಿ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ವ್ಯವಸಾಯಗಾರರ ಬಗ್ಗೆ ಸರ್ಕಾರ ಸಾಕಷ್ಟು ಮಮತೆಯನ್ನು ಹೊಂದಿದೆ. ವ್ಯವಸಾಯಗಾರರ ಬೇಡಿಕೆಗಳನ್ನು ಪೂರ್ಣ ಮಾಡಬಾರದು ಎಂಬುದು ಸರ್ಕಾರದ ಉದ್ದೇಶ ಅಲ್ಲ. ಇವತ್ತು ತಮಿಳುನಾಡಿನಲ್ಲೂ ಕೂಡ ಎಷ್ಟೋ ಚಳುವಳಿಯಾಗಿದೆ ಕೊನೆಗೆ ಚಳುವಳಿಗಾರರು ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡು ಸರ್ಕಾರದ ಜೊತೆಯಲ್ಲಿ ಮಾತುಕತೆ ಮಾಡಿಕೊಂಡು ಇರತಕ್ಕ ಸಮಸ್ಯೆಯನ್ನು ಬಗೆಹರಿಸಿಕೊಂಡಿದೆ. ಅದೇ ರೀತಿ ನಮ್ಮಲ್ಲೂ ಕೂಡ ಪರಸ್ಪರ ವಿಚಾರ ವಿಮರ್ಶೆ ಮಾಡುವುದರಿಂದ ಇರತಕ್ಕ ಸಮಸ್ಯೆಯನ್ನು ಬಗೆಹರಿಸಬಹುದು. ಮತ್ತು ಸರ್ಕಾರ ಈ ವಿಷಯವನ್ನು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ. ಒಂದು ಸಮಯ ಸಮಿತಿಯವರು ತೀರ್ಮಾನ ತೆಗೆದುಕೊಂಡು ರೇಟನ್ನು ಕಡಿಮೆ ಮಾಡಬೇಕೆಂದರೂ ವಿದ್ಯುಚ್ಛಕ್ತಿ ಮಂಡಲಿಗೆ ಇದರಿಂದ ಉಂಟಾಗುವ ನಷ್ಟವನ್ನು ಸರ್ಕಾರದವರು ಭರ್ತಿ ಮಾಡಿಕೊಡಬೇಕಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಯದ್ದೂ ತಪ್ಪುಗಳು ಇರಬಹುದು, ೫೦-೪೦ ಸಾವಿರ ಜನಗಳು ಕೆಲಸ ಮಾಡತಕ್ಕಂಥ ಒಂದು ಸಂಸ್ಥೆ. ಆ ಸಂಸ್ಥೆ ಎಲ್ಲಕ್ಕಿಂತ ಹೆಚ್ಚಿಗೆ ಎಫಿಸಿಯಂಟ್ ಆಗಿ ಕೆಲಸ ಮಾಡುತ್ತಿದೆ ಎಂದೂ ಹೇಳುವುದಿಲ್ಲ. ಅವರಿಗಳನ್ನು ತಾವು ನೋಡಬಹುದು. ಭಾರತ ದೇಶದಲ್ಲಿರುವ ಅನೇಕ ವಿದ್ಯುಚ್ಛಕ್ತಿ ಮಂಡಲಿಗಳಲ್ಲಿ ನಮ್ಮ ವಿದ್ಯುಚ್ಛಕ್ತಿ ಮಂಡಲಿಯ ಕೆಲಸ ಕಾರ್ಯಗಳ ಬಗ್ಗೆ ಒಂದು ಹೆಚ್ಚಿನ ಸ್ಥಾನ ಸಿಕ್ಕಿದೆ. ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಎಫಿಸಿಯನ್ಸಿ ಇಲ್ಲದಿರುವುದರಿಂದ ಟ್ಯಾರಿಫ ನ್ನು ಹೆಚ್ಚು ಮಾಡುತ್ತಿದ್ದಾರೆ ಎಂಬುದಾಗಿ ಹೇಳತಕ್ಕಾಂಥಾದ್ದು ಆಷ್ಟುಸಮಂಜಸವಾದುದಲ್ಲ ಆದ್ದರಿಂದ ನ್ಯಾಯವಾಗಿ ವ್ಯವಸಾಯಗಾರರಿಗೆ ಏನು ಹೆಚ್ಚಳ ಮಾಡಬೇಕೋ ಅದನ್ನು ಅವರು ಹೊರಬೇಕಾಗುತ್ತದೆ. ಆದರ ಬಗ್ಗೆ ಮಾನ್ಯ ಸದಸ್ಯರೂ ಕೂಡ ಸರ್ಕಾರಕ್ಕೆ ಬೆಂಬಲ ಕೊಡಬೇಕಾಗುತ್ತದೆ. ವ್ಯವಸಾಯಗಾರರಿಗೆ ಸರ್ಕಾರದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದು ಸರ್ಕಾರದವರೊಬ್ಬರ ಜವಾಬ್ದಾರಿಯಲ್ಲ. ನಮ್ಮೆಲ್ಲರ ಜವಾಬ್ದಾರಿ ನಿಮಗೂ ಕೂಡ ಇದೆ. ಆ ಒಂದು ದೃಷ್ಟಿಯಿಂದ ಈ ವಿಷಯವನ್ನು ವಿವೇಚನೆ ಮಾಡಬೇಕು, ಚಳುವಳಿ ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಅನಗತ್ಯ ಎಂಬುದಾಗಿ ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್—ಸರ್ಕಾರ ಪರಿಶೀಲನೆ ಮಾಡುವವರೆಗೂ ಡಿಸೆಕನೆಕ್ಟ್ ಮಾಡದ ಹಾಗೆ ಸರ್ಕಾರದವರು ನೋಡಿಕೊಳ್ಳಬೇಕು.

ಶ್ರೀ ಕೆ.ಎಚ್. ಶ್ರೀನಿವಾಸ್.—ಡಿಸ್‌ಕನೆಕ್ಟ್ ಮಾಡಿಸದ ಹಾಗೆ ಸೂಚನೆಯನ್ನು ಕೊಡುತ್ತೇನೆ.

Observation of the Chair about Absence of the Minister and Members

ಅಧ್ಯಕ್ಷರು—ಪ್ರಶ್ನೋತ್ತರದ ಸಮಯದಲ್ಲಿ ಸದಸ್ಯರ ಹಾಜರಾತಿ ಇಲ್ಲದಿದ್ದರೂ ಬಹಳ ಕಷ್ಟವಾಗುತ್ತದೆ. ಮತ್ತು ಮಾನ್ಯ ಸಚಿವರುಗಳೂ ಕೂಡ ಸರಿಯಾದ ಸಮಯಕ್ಕೆ ಉತ್ತರ ಕೊಡಲು ಬಾರದಿದ್ದರೂ ಕೂಡ ಬಹಳ ತೊಂದರೆಯಾಗುತ್ತದೆ. ಒಂದು ಪ್ರಶ್ನೆಗೆ ಉತ್ತರವನ್ನು ಸರ್ಕಾರದಿಂದ ತರಿಸಬೇಕಾದರೆ ಎಷ್ಟು ಸಾವಿರ ರೂಪಾಯಿಗಳು ಸರ್ಕಾರಕ್ಕೆ ಖರ್ಚಾಗುತ್ತವೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದನ್ನು ಮಾನ್ಯ ಸದಸ್ಯರುಗಳಾಗಲೀ ಹಾಗೂ ಮಾನ್ಯ ಸಚಿವರುಗಳಾಗಲೀ ಅರ್ಥ ಮಾಡಿಕೊಳ್ಳಬೇಕು. ಇದರಿಂದ ಸರ್ಕಾರಕ್ಕೂ ನಷ್ಟವಾಗುತ್ತದೆ. ಸಾರ್ವಜನಿಕರಿಗೂ ನಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಪುನಃ ರಿಪೀಟ್ ಮಾಡಬಾರದು ಎಂಬುದಾಗಿ ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ—ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆ ಶುರುವಾಗುವುದಕ್ಕೆ ಮುಂಚೆ ನನ್ನದೊಂದು ಸಣ್ಣ ಮನವಿ. ನಾನು ಸುಮಾರು ಕಾಲಿಂಗ್ ಅಟೆನ್ಷನ್ ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ಮತ್ತು ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಆದರೆ ಇದುವರೆಗೂ ಒಂದು ಪ್ರಶ್ನೆಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಮತ್ತು ಕಬ್ಬು ಬೆಳೆಯುವವರ ಬಗ್ಗೆ ೩೪೦ ರೂಪಾಯಿಗಳ ಟ್ಯಾಕ್ಸ್ ಹಾಕಿರುತ್ತಾರೆ ಅದರ ಬಗ್ಗೆ ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು—ಇಂತಹ ವಿಚಾರಗಳು ಏನಾದರೂ ಇದ್ದರೆ ನನ್ನ ಕಡೆ ಬಂದು ಮಾತನಾಡಿ. It will be posted on Monday.

11-30 A.M.

Budget Estimates for 1978—79

General Discussion (Debate Continued).

CHAIRMAN (Smt. Sumati B. Madiman) in the Chair.

†ಶ್ರೀ ಆನಂದ ಕುಂದ ಹೆಗ್ಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನಾವು ಇಷ್ಟರವರೆಗೂ ಗುಡುಗು, ಮಿಂಚು ಮತ್ತು ಸಿಡಿಲು ಈ ಸಭೆಯಲ್ಲಿ ಕಂಡ ಹಾಗಾಯಿತು ಈಗ ಮಳೆ, ಆ ದೃಷ್ಟಿಯಿಂದ ನಿಮ್ಮ ರಕ್ಷಣೆಯ ಹಿನ್ನೆಲೆಯಲ್ಲಿ ನಮ್ಮ ೧೯೭೮ ನೇ ಮುಂಗಡ ಪತ್ರ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ. ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಆರ್ಥಮಂತ್ರಿಗಳವರು ಕೆಲವು ಮಾತುಗಳನ್ನು ಬಜೆಟ್‌ನಲ್ಲಿ ಹೇಳಿದ್ದಾರೆ ಅದನ್ನು ಉಲ್ಲೇಖಿಸುವುದಾದರೆ, "ಬಜೆಟು ಆರ್ಥಿಕ ಮತ್ತು ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ಮತ್ತು ನಮ್ಮ ಉದ್ದೇಶಗಳ ಸಾಧನೆಯಲ್ಲಿ ಒಂದು ಪ್ರಭಲ ಮಾಧ್ಯಮ ವಾಗಿದೆ..... ಈ ದೃಷ್ಟಿಯಿಂದ ಈ ಬಜೆಟ್‌ನಲ್ಲಿ ನಾನು ಸರ್ಕಾರದ ತಾತ್ವಿಕ, ಆರ್ಥಿಕ ಮತ್ತು ಸಾಮಾಜಿಕ ನೀತಿಯ ಆದರಗಳನ್ನು ಪ್ರತಿಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ಆಳವಡಿಸಿದ್ದೇನೆ" ಎಂದು ಹೇಳಿದ್ದಾರೆ. ಆ ರೀತಿಯಾಗಿ ಅವರು ಹೇಳಿರತಕ್ಕದ್ದೆಲ್ಲಾ ಪೂರಕವಾಗಿದೆ, ಪೋಷಕವಾಗಿದೆ. ನಮ್ಮ ರಾಜ್ಯದಲ್ಲಿ ಮೂರು ಮುಕ್ಕಾಲು ಕೋಟಿ ಜನತೆ ಇದೆ ನಮಗೆ ಸರಾಸರಿಯಲ್ಲಿ ಇವತ್ತು ೨೦೦ ರೂಪಾಯಿ ಮುಂಗಡ ಪತ್ರವನ್ನು ಹಾಕಿರುವುದರಿಂದ ಪ್ರತಿಯೊಬ್ಬರ ತಲೆಗೆ ಬರುತ್ತದೆ ಈ ಹಿಂದೆ ಕೂಡ ೧೯೭೭ನೇ ಇಸ್ವಿಯಲ್ಲಿ ಸರಾಸರಿ ೫೮೦ ಇದ್ದುದು ೧೯೭೮-೭೯ಕ್ಕೆ ಅದು ಸರಾಸರಿ ೭೯೦ ರೂಪಾಯಿ ಗಳಿಗೆ ಮುಟ್ಟಿದೆ. ಇದು ಕೂಡ ಅಪ್ರಗತಿಯಿಂದ ಪ್ರಗತಿಯ ಕಡೆಗೆ, ಅನಭಿವೃದ್ಧಿಯಿಂದ ಅಭಿವೃದ್ಧಿಯ ಕಡೆಗೆ ಪರಮಾನವನ್ನು ಹೆಚ್ಚಿಸುವುದರಲ್ಲಿ ಈ ಮುಂಗಡ ಪತ್ರವೂ ಕೂಡ ಸಮರ್ಥವಾಗಿದೆ. ಆ ದೃಷ್ಟಿ ಯಿಂದ ನಮ್ಮ ಗ್ರಾಮಾಂತರ ಜನಜೀವನವು ಉನ್ನತಿ ಹೊಂದುವ ದೃಷ್ಟಿಯಿಂದ ನಮ್ಮ ಆರ್ಥ ಮಂತ್ರಿಗಳವರು ಬಹಳ ಒಳ್ಳೆಯ ಸಮರ್ಥನೀಯವಾದ ಮುಂಗಡ ಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಜೊತೆಯಲ್ಲಿ ಇದರಲ್ಲಿ ಸ್ವಾಗತಿಸುವ ಅಂಶವೇನಿದೆ ಎಂದರೆ ಈ ಬಜೆಟ್‌ನಲ್ಲಿ ೧೯೭೮-೭೯ ರಲ್ಲಿ ಹೊಸ ತೆರಿಗೆಗಳು ಇಲ್ಲ. ಪ್ರತಿ ವರ್ಷ ಮುಂಗಡ ಪತ್ರದಲ್ಲಿ ಹೊಸ ತೆರಿಗೆಯನ್ನು ಹಾಕುವಾಗ ಆರ್ಥಿಕವಾಗಿ ಮುಂದುವರಿಯುತ್ತಿರುವ ದೇಶದಲ್ಲಿ ಅದು ಒಂದು ಸಂಪ್ರದಾಯ ಬದ್ಧವಾಗಿ. ನಿಯಮಿತ ವಾಗಿ, ಯಾವಾಗಲೂ ವಸ್ತು ನಿಷ್ಠೆಯಿಂದ, ವಿಷಯ ನಿಷ್ಠೆಯಿಂದ ತೆರಿಗೆಗಳನ್ನು ಹಾಕುವಾಗ ಯಾವ ರೀತಿಯಾಗಿ ತೆರಿಗೆಯನ್ನು ಹಾಕಬೇಕೆಂದು ನಮ್ಮ ಅರ್ಥ ಶಾಸ್ತ್ರದಲ್ಲಿಯೇ ಹೇಳಿದ್ದಾರೆ. ಅದು ಏನೆಂದರೆ ಬುದ್ಧಿವಂತನಾದವನು ಆವರವರ ಹತ್ತಿರ ತನ್ನ ಆರ್ಥಿಕ ಸಮಾನತೆಯನ್ನು ಉಳಿಸಿಕೊಂಡು ಹೋಗು ತ್ತಾನೆ, ಬಳಸಿಕೊಂಡು ಹೋಗುತ್ತಾನೆಂದು ಹೇಳಿದ್ದಾರೆ. ಆ ನೆರೆಯಲ್ಲಿ ಇದನ್ನು ನಾವು ನೋಡುವು ದಾದರೆ ಸಮರ್ಥವಾಗಿದೆ. ನಾವು ಯಾವಾಗಲೂ ಶಾಸ್ತ್ರವನ್ನು ಅಳವಡಿಸಬೇಕು. ಚಾಣಕ್ಯನ ಅರ್ಥಿಕ ಶಾಸ್ತ್ರದಲ್ಲೂ ಜೊತೆಯಲ್ಲಿ ಇರುವ ಮಧುರವನ್ನು ನೋಡಿ ಹೇಗೆ ಅದರ ಸೌಂದರ್ಯವನ್ನು ಹಾಳು ಮಾಡದೇ ಕಂಡಿಯಂತ್ರದೆಯೋ ಹಾಗೆ ಜನರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದಾನೆ. ಹಾಗೆಯೇ ಆ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಲ್ಲಿ, ಆ ನೆರೆಯಲ್ಲಿಯೇ ಪ್ರಯತ್ನವನ್ನು ನಮ್ಮ ಆರ್ಥ ಮಂತ್ರಿಗಳವರು ಮಾಡಿದ್ದಾರೆ.

ಶ್ರೀ ಎಂ. ಮಲ್ಲೂರು ಆನಂದರಾವ್.—ದುಂಬಿ, ನೋಣ ಮಧುವನ್ನು ಹೀರುವಂತೆ ಮಾಡ ಬೇಕೆಂದು ತಾವು ಸಲಹೆ ಕೊಡುತ್ತಿದ್ದೀರಿ ಆದರೆ ನಮ್ಮ ಸರ್ಕಾರ ರಕ್ತದ ತರಹ ಹೀರುತ್ತಿದ್ದಾರೆ.